**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 596/2024 |
| ಸಿ.ಡಬ್ಲ್ಯೂ | - 01 |
| ಪಿ.ಡಬ್ಲ್ಯೂ | - 01 |
| ಸಾಕ್ಷಿಯ ಹೆಸರು | - ಹಸನಸಾಬ ಮಹಮ್ಮದಸಾಬ ಗದಗ |
| ವಯಸ್ಸು | - 41 ವರ್ಷ |
| ಉದ್ಯೋಗ | - ಚಾಲಕ |
| ವಾಸ ಸ್ಥಳ | - ಭದ್ರಾಪೂರ |

ದಿನಾಂಕಃ 20/05/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-8, 9 ರವರ ಪರಿಚಯವಿಲ್ಲ. ಚಾಸಾ-10 ರಿಂದ 14 ರವರ ಪರಿಚಯ ಇದೆ.

ದಿನಾಂಕಃ 23-06-2021 ರಂದು ನನ್ನ ಲಾರಿ ಪಂಚರ ಆಗಿದ್ದು, ಸದರಿ ಲಾರಿಯ ಗಾಲಿಯನ್ನು ಸರಿ ಮಾಡಿಸಿಕೊಳ್ಳಲು ಪಂಚರ ಅಂಗಡಿಯ ಹತ್ತಿರ ನಿಂತುಕೊಂಡಿದ್ದಾಗ ಸಂ.05.30 ಗಂಟೆಗೆ ಒಂದು ಕಾರು ಅತೀ ವೇಗ ಹಾಗೂ ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಅಂಗಡಿಯ ಹತ್ತಿರ ನಿಂತಿದ್ದ ನಮ್ಮ ವಾಹನದ ಕ್ಲೀನರ್ ಶೇಖರ ಜಾವೂರ ರವರಿಗೆ ಅಪಘಾತಪಡಿಸಿದ್ದು, ನಂತರ ಸದರಿಯವನನ್ನು ಕಿಮ್ಸ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಸದರಿಯವರು ರಾ. 08.30 ಗಂಟೆಗೆ ಮೃತಪಟ್ಟಿರುತ್ತಾರೆ. ನಂತರ ನಾನು ಪೋಲಿಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿದ ಗುರುತಿಸಿದ ದೂರನ್ನು **ನಿಪಿ-1** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು

ಗುರುತಿಸಲಾಯಿತು. ನಂತರ ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಹಾಗೂ ಶವ ಪಂಚನಾಮೆಗಳನ್ನು ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಗುನ್ಹಾ ಸ್ಥಳದ ಪಂಚನಾಮೆಯನ್ನು **ನಿಪಿ-2** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಶವ ಪಂಚನಾಮೆಯನ್ನು **ನಿಪಿ-3** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು **ನಿಪಿ-4** ಎಂದು ಗುರುತಿಸಲಾಯಿತು. ಸದರಿ ಅಪಘಾತ ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಂತರ ಪೋಲೀಸರು ನನ್ನನ್ನು ಪೋಲೀಸ ಠಾಣೆಗೆ ಕರೆಯಿಸಿ ಪ್ರಕರಣದ ಬಗ್ಗೆ ವಿಚಾರಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ -**

ನಮ್ಮ ಕ್ಲೀನರ್ ಗೆ ಅಪಘಾತ ಪಡಿಸಿದ ಕಾರ್ ಸಂಖ್ಯೆಃ KA-26/B-2162 ಎಂದು ಇತ್ತು ಎಂದರೆ ಸರಿ. ಸದರಿ ಅಪಘಾತವಾದಾಗ ಬೆ.09.15 ಗಂಟೆಯಾಗಿತ್ತು ಎಂದರೆ ಸರಿ. ನಮ್ಮ ಕ್ಲೀನರ್ ಮೃತಪಟ್ಟಿದ್ದರ ಕುರಿತು ಪೋಲೀಸರಿಗೆ ಪುನರ್ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ನಾನು ತೋರಿಸಿದ ಮೇರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಂ ಎಸ್ ಎಚ್ ವಕೀಲರಿಂದಃ**

ನಾನು ಪೋಲೀಸ ಠಾಣೆಗೆ ಹೋದಾಗ ಸಮಯ ಸಂ.06.00 ರಿಂದ 06.30 ಗಂಟೆಯಾಗಿತ್ತು. ದೂರನ್ನು ಸಲ್ಲಿಸಲು ನಾನು ಒಬ್ಬನೇ ಹೋಗಿರುತ್ತೇನೆ. ನಿಪಿ-1 ಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ-1 ನ್ನು ಸಂತೋಷ ಎನ್ನುವ ಅಣ್ಣಿಗೇರಿಯ ಪೋಲೀಸರು ಬರೆದಿರುತ್ತಾರೆ. ನಾನು ಪೋಲೀಸ ಠಾಣೆಯಲ್ಲಿ 30-40 ನಿಮಿಷಗಳ ಕಾಲ ಇದ್ದೇನು. ನನ್ನ ದೂರಿನಲ್ಲಿ ನಮ್ಮ ಟ್ರಕ್ ನ ಸಂಖ್ಯೆಯನ್ನು ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ಟ್ರಕ್ ಭದ್ರಾಪೂರ ಬಸ್ ನಿಲ್ದಾಣದ ಹತ್ತಿರ ನಿಂತಿತ್ತು. ಬಸ್ ನಿಲ್ದಾಣದಿಂದ ಪಂಚರ ಅಂಗಡಿ 400-500 ಮೀ. ಅಂತರದಲ್ಲಿತ್ತು. ಸದರಿ ಟ್ರಕ್ ಗದಗ ಕಡೆಗೆ ಮುಖ ಮಾಡಿ

ನಿಂತಿತ್ತು. ಸದರಿ ಟ್ರಕ್ ನ ಹಿಂಬದಿಯ ಎಡ ಭಾಗದ ಚಕ್ರ ಪಂಚರ ಆಗಿತ್ತು. ನಾವು ರಸ್ತೆಯಿಂದ 20 ಮೀ. ಅಂತರದಲ್ಲಿ ಪಂಚರ ಅಂಗಡಿಯ ಮುಂದೆ ನಿಂತಿದ್ದೇವು. ಸದರಿ ವೇಳೆಗೆ ನಮ್ಮ ಕ್ಲೀನರ್ ಟೈಯರ್ ಹತ್ತಿರ ಇದ್ದನು. ಸದರಿ ಅಂಗಡಿ ಪೂರ್ವಾಭಿಮುಖವಾಗಿದೆ. ರಾಷ್ಟ್ರೀಯ ಹೆದ್ದಾರಿ ಪೂರ್ವ ಪಶ್ಚಿಮವಾಗಿದೆ ಎಂದರೆ ಸರಿ. ಪಂಚರ ಅಂಗಡಿಯಿಂದ 150 ಮೀ. ಅಂತರದಲ್ಲಿ ಮುಖ್ಯ ಹೆದ್ದಾರಿಯಿಂದ ಭದ್ರಾಪೂರಕ್ಕೆ ಹೋಗುವ ಒಳರಸ್ತೆ ಇರುತ್ತದೆ. ಅಕ್ಕ ಪಕ್ಕದ ಹೊಲದ ಮಾಲೀಕರು ಸದರಿ ಒಳ ರಸ್ತೆಯ ಮುಖಾಂತರ ತಮ್ಮ ಟ್ರಾಕ್ಟರ್ ನ್ನು ರಾಷ್ಟ್ರೀಯ ಹೆದ್ದಾರಿಗೆ ತರುತ್ತಾರೆ. ಅಪಘಾತ ಸ್ಥಳದಿಂದ U ಟರ್ನ್ ಇರುವ ಸ್ಥಳ 150 ಮೀ. ಅಂತರದಲ್ಲಿದೆ. ಭದ್ರಾಪೂರದಿಂದ ಗದಗ ನಿಂದ ಹುಬ್ಬಳ್ಳಿಗೆ ಹೋಗುವ ರಸ್ತೆಗೆ ಹೋಗಲು ಭದ್ರಾಪೂರದಿಂದ 3 ½ ಕಿ. ಮೀ. ನಂತರದಲ್ಲಿ ಬರುವ U ಟರ್ನ ಮುಖಾಂತರ ಹೋಗಬೇಕಾಗುತ್ತದೆ. ಭದ್ರಾಪೂರದ ಜಮೀನಿನವರು ಸದರಿ U ಟರ್ನ ದೂರವಿರುವ ಕಾರಣ ವಿರುದ್ಧ ದಿಕ್ಕಿನಲ್ಲಿ ತಮ್ಮ ಟ್ಯಾಕ್ಟರ್ ನ್ನು ಚಲಾಯಿಸುತ್ತಾರೆ ಎಂದರೆ ಸರಿ. ನಿಪಿ-4 ರಲ್ಲಿರುವ ಟ್ಯಾಕ್ಟರ್ ನ ದಿಂಡಿನಕುಂಟೆ ನೆಲಕ್ಕೆ ಹತ್ತಿರುವುದಿಲ್ಲ ಎಂದರೆ ಸರಿ. ಟ್ಯಾಕ್ಟರ್ ನಿಂತ ವೇಳೆ ಸದರಿ ಕುಂಟೆಯನ್ನು ನೆಲಕ್ಕೆ ಇಳಿಸುತ್ತಾರೆ ಎಂದರೆ ಸರಿ. ಸದರಿ ಟ್ಯಾಕ್ಟರ್ ಕಾಶಪ್ಪ ಶೆಟ್ಟರ್ ಎನ್ನುವವರಿಗೆ ಸಂಬಂಧಿಸಿರಬಹುದು. ಸದರಿ ಟ್ಯಾಕ್ಟರ್ ನ ಮಾಲೀಕರು ನಮ್ಮ ಊರಿನವರು ಎಂದರೆ ಸರಿ. ಆರೋಪಿ ಚಾಲಕ ಸದರಿ ದಿನ ಕಾರನ್ನು ನಿಧಾನವಾಗಿ ಚಲಾಯಿಸುತ್ತಿದ್ದು ಒಳ ರಸ್ತೆಯಿಂದ ಟ್ಯಾಕ್ಟರ್ ಮುಖ್ಯ ರಸ್ತೆಗೆ ಒಮ್ಮಿಂದ ಒಮ್ಮಲೇ ವಿರುದ್ಧ ದಿಕ್ಕಿನಲ್ಲಿ ಬಂದಿದ್ದರಿಂದ ಸದರಿ ಟ್ಯಾಕ್ಟರ್ ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ಲೀನರ್ ನ ಕುಟುಂಬದವರು ಈಗಾಗಲೇ ಪರಿಹಾರದ ಹಣ ಪಡೆದಿರುತ್ತಾರೆ ಎಂದರೆ ಸರಿ.

2. ದೂರು ಸಲ್ಲಿಸಿದ ಮರು ದಿನ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೋಲೀಸ ಸಿಬ್ಬಂದಿ ಬರೆದಿರುತ್ತಾರೆ. ನಾನು ಪೋಲೀಸರು ಕೇಳಿದ ಮೇರೆಗೆ ಅಪಘಾತದ ಸ್ಥಳವನ್ನು ತೋರಿಸಿರುತ್ತೇನೆ. ಸದರಿ ಟ್ಯಾಕ್ಟರ್ ಗೆ ವಿಮೆ ಇರದ ಕಾರಣ ಹಾಗೂ ಅದರ ಮಾಲೀಕರು ನಮ್ಮ ಊರಿನವರಾದ ಕಾರಣ ನಮ್ಮ ಕ್ಲೀನರ್ ನ ಕುಟುಂಬಕ್ಕೆ ಪರಿಹಾರ ಕೊಡಿಸುವ

ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**